ಸಂಪಾದಕೀಯ

# ಶ್ರೀಮಾತೆಯವರಿಗೊಂದು ಪತ್ರ



ಪತ್ರಗಳು ನಮ್ಮ ಅಂತರಂಗದ ಭಾವನೆಯನ್ನು ನಾವು ನಮ್ಮ ಹತ್ತಿರದವರಲ್ಲಿ ತೋಡಿಕೊಳ್ಳುವ ಪ್ರಬಲ ಮಾಧ್ಯಮಗಳು. ಶ್ರೀಮಾತೆ ಶಾರದಾದೇವಿಯರಲ್ಲಿ ನಾವು ನಮ್ಮ ಹೃದಯದ ನೋವನ್ನು ತೋಡಿಕೊಳ್ಳಬೇಕಾಗಿದೆ; ಅವರಿಂದ ಅದಕ್ಕೆ ಪರಿಹಾರವನ್ನು ಪಡೆಯಬೇಕಾಗಿದೆ. ಹೀಗಾಗಿ ನಮ್ಮ ಮನಸ್ಸಿನ ಪುಟಗಳಲ್ಲಿ ಅವರಿಗೊಂದು ಪತ್ರ ಬರೆದರೆ ಹೇಗಿರುತ್ತದೆ? ಅದು ಹೋಗಿ ಸೇರುತ್ತದೆಯೋ, ಇಲ್ಲವೋ ಎಂಬ ಸಂಶಯ ಬೇಡ. ಹೃದಯದ ಸಂವೇದನೆಯನ್ನು ನೇರವಾಗಿ ಗ್ರಹಿಸಬಲ್ಲರು, ನಮ್ಮ ಶ್ರೀಮಾತೆಯವರು. ಇನ್ನು ಪತ್ರ ಬರೆಯೋಣವೇ?

**ಪ್ರೀತಿಯ ತಾಯಿ,**

ನಿಮ್ಮ ಪವಿತ್ರ ಚರಣಾರವಿಂದಗಳಲ್ಲಿ ಕೋಟಿ ಕೋಟಿ ಪ್ರಣಾಮಗಳು.

ಅಮ್ಮಾ, ನೀವು ಹುಟ್ಟಿದ್ದು ಕುಗ್ರಾಮದಲ್ಲಿ; ಬೆಳೆದಿದ್ದು ಬಡ ಕುಟುಂಬದಲ್ಲಿ. ಮದುವೆಯಾಗಿದ್ದು ಲೋಕೋತ್ತರ ಪುರುಷರಾದ ಶ್ರೀರಾಮಕೃಷ್ಣರನ್ನು. ಅವರು ನಿಮ್ಮ ತನುವಿನಲ್ಲಿ ಜಗನ್ಮಾತೆಯನ್ನೇ ಕಂಡು ಉಪಾಸನೆ ಮಾಡಿದರು. ಜಗತ್ತಿನ ಜನರ ನೊಂದ ಬೆಂದ ಹೃದಯಗಳನ್ನು ತಣಿಸುವ ಕಾರ್ಯದಲ್ಲಿ ನಿಮ್ಮನ್ನು ನಿಯೋಜಿಸಿದರು. ಅದಕ್ಕಾಗಿ ನಿಮ್ಮ ಜೀವನದ ಕಣಕಣವನ್ನೂ ನೀವು ಧಾರೆಯೆರಿದಿರಿ. ಅಸಂಖ್ಯ ಭಕ್ತ-ಮಕ್ಕಳ ಬಾಳಿನಲ್ಲಿ ಬೆಳಕು ತುಂಬಿದಿರಿ. ತಾಯೇ, ನನ್ನದೊಂದೇ ಕೊರಗು. ನಿಮ್ಮ ಜೀವಿತಕಾಲದಲ್ಲಿ ನಾನು ಹುಟ್ಟಲಿಲ್ಲವಲ್ಲಾ! ನಿಮ್ಮನ್ನು ಒಮ್ಮೆ ಕಣ್ಣಾರೆ ಕಂಡು, ನಿಮ್ಮ ಪಾದಸ್ಪರ್ಶ ಮಾಡಿ, ಪುನೀತನಾಗುವ ಭಾಗ್ಯ ನನಗೆ ಪ್ರಾಪ್ತವಾಗಲಿಲ್ಲವಲ್ಲಾ!

ಆದರೆ ನೀವೀಗ ವಿಶ್ವಸ್ವರೂಪಿಣಿಯಾಗಿಬಿಟ್ಟಿದ್ದೀರಂತೆ! ಪಾಪಿ, ತಾಪಿ, ಆರ್ತ ಭಕ್ತ-ಮಕ್ಕಳು ಯಾವ ಕಾಲದಲ್ಲಿಯಾದರೂ, ಯಾವ ಸ್ಥಳದಲ್ಲಿಯಾದರೂ, 'ಅಮ್ಮಾ' ಎಂದು ಕೂಗಿ ಕರೆದರೆ ನೀವು ಓಗೊಡುವಿರಂತೆ! ಸಂಸಾರದ ತಾಪತ್ರಯಗಳಲ್ಲಿ ಬೆಂದ ನಮ್ಮ ಹೃದಯಕ್ಕೆ ತಂಪನ್ನು ನೀವು ಖಂಡಿತ ಎರೆಯುವಿರಂತೆ! ಇದು ನಿಜವೇ ತಾಯಿ?! ಹಾಗಾದರೆ, ಎಷ್ಟು ಸಲ ಕಣ್ಣೀರು ಹರಿಸುತ್ತ ನಿಮ್ಮಲ್ಲಿ ನನ್ನ ಕಡುಕಷ್ಟಗಳನ್ನು ನಾನು ತೋಡಿಕೊಂಡಿಲ್ಲ! ಎಷ್ಟು ಸಲ 'ಅಮ್ಮಾ, ಅಮ್ಮಾ' ಎಂದು ಮನಸಾರೆ ಪ್ರಾರ್ಥಿಸಿಲ್ಲ! ಅದಕ್ಕೆಲ್ಲ ನೀವೇಕೆ ಇನ್ನೂ ಓಗೊಟ್ಟಿಲ್ಲ? ಶ್ರದ್ಧೆಯ ಕೊರತೆಯೇ ಇದಕ್ಕೆ ಕಾರಣವೆಂದು ತೋರುತ್ತದೆ. ಹಾಗಾದರೆ ಆ ಶ್ರದ್ಧೆ-ಭಕ್ತಿ-ಜ್ಞಾನಗಳನ್ನು ನಮ್ಮಂಥ ದೀನಜನರಿಗೆ ನೀಡುವವರೂ  ನೀವೇ ಅಲ್ಲವೇ, ತಾಯೇ? ನಮ್ಮ ಮೇಲೆ ನಿಮ್ಮ ಕರುಣೆ ಇನ್ನೂ ಏಕೆ ಹರಿದಿಲ್ಲ? ಅದಕ್ಕಾಗಿ ಇನ್ನೆಷ್ಟು ನೋವು ಸಂಕಟಗಳನ್ನು ನಾವು ಅನುಭವಿಸಬೇಕು? ಇನ್ನೆಷ್ಟು ದುಃಖದುಮ್ಮಾನಗಳ ಮೂಲಕ ಹಾದುಹೋಗಬೇಕು? ತಾಯೇ, ಬೇಗನೆ ಕರುಣೆ ತೋರಲಾರಿರಾ? ನಮ್ಮನ್ನು ಈ ಪಾಪಕೂಪದಿಂದ ಬಿಡಿಸಲಾರಿರಾ?

ತಾಯೇ, ಎಲ್ಲವೂ ಭಗವಂತನ ಇಚ್ಛೆಯಂತೆಯೇ ನಡೆಯುತ್ತದೆ ಎಂದು ತಾವು ಹೇಳುತ್ತೀರಿ; ಪ್ರತಿಯೊಬ್ಬನೂ ತನ್ನ ಕರ್ಮಫಲವನ್ನು ಅನುಭವಿಸಿಯೇ ತೀರಬೇಕು ಎಂದೂ ಬೋಧಿಸಿದ್ದೀರಿ. ಹಾಗಾದರೆ ಈ ಸಂಸಾರಚಕ್ರದಲ್ಲಿ ಸಿಕ್ಕಿಬಿದ್ದಿರುವ ನಮ್ಮ ಪಾಡೇನು? ನಾವೆಂದು ಶಾಂತಿ-ನೆಮ್ಮದಿಗಳನ್ನು ಹೊಂದುವುದು? ಹಾಗೆಯೇ ತಾಯೇ, ಜಗತ್ತಿನ ಕಷ್ಟನಷ್ಟಗಳ ನಡುವೆ ಸಮತ್ವವನ್ನು ನೀವು ಬೋಧಿಸುತ್ತೀರಿ. ಅದರಂತೆಯೇ ಆದರ್ಶದ ಬಾಳನ್ನು ತಾವು  ಬದುಕಿದ್ದೀರಿ. ಆ ಸಮತ್ವ

ಬುದ್ಧಿಯು ಆಧ್ಯಾತ್ಮಿಕ ಸುಸಂಪನ್ನತೆಯಿಂದ ಮಾತ್ರವೇ ಬರುವಂಥದ್ದು. ಜಪ-ಧ್ಯಾನ-ಪ್ರಾರ್ಥನೆಗಳನ್ನು ಅನವರತವಾಗಿ ಮಾಡುವುದರಿಂದಲೇ ಸಿದ್ಧಿಸುವಂಥದ್ದು. ಇದೇ ನಿಮ್ಮ ಉಪದೇಶಗಳ ತಿರುಳು. ಈ ಬಗೆಯ ಆಧ್ಯಾತ್ಮಿಕ ಸಾಧನೆಗಾದರೂ, ಮಾನಸಿಕ ಸ್ಥೈರ್ಯ, ಭಾವ ಪರಿಶುದ್ಧತೆಗಳು ಬೇಕಲ್ಲವೇ? ಅವುಗಳನ್ನು ನೀವೇ ತಾನೇ ನಮಗೆ ಕರುಣಿಸಬೇಕು? ಜನ್ಮಜನ್ಮಾಂತರಗಳ ಭೀಕರ ಸಂಸ್ಕಾರಗಳ ಕಡುಹೊರೆಯನ್ನು ಹೊತ್ತುಕೊಂಡಿರುವ ನಮಗೆ ಆ ಆಧ್ಯಾತ್ಮಿಕ ಔನ್ನತ್ಯವನ್ನು ಏರಲು ಹೇಗೆ ತಾನೇ ಸಾಧ್ಯ?

ತಾಯೇ, ನೀವು ಜಗಜ್ಜನನಿಯ ಮಾನುಷರೂಪರಂತೆ! ಶ್ರೀರಾಮಕೃಷ್ಣರೇ ಅಂದಂತೆ, ಜನರಲ್ಲಿ ಜ್ಞಾನವನ್ನು ಪಸರಿಸಲು ಬಂದ ಸರಸ್ವತಿ ಸ್ವರೂಪರಂತೆ! ನಮ್ಮ ಬುದ್ಧಿಯಲ್ಲಿ ಜ್ಞಾನ, ಮನಸ್ಸಿನಲ್ಲಿ ಭಕ್ತಿ ಮತ್ತು ಕೃತಿಯಲ್ಲಿ ವೈರಾಗ್ಯ ಮೂಡುವಂತೆ ಹರಿಸಲಾರಿರಾ? ನಮ್ಮ ಸಂಸ್ಕಾರಗಳ ಕಾಲುಷ್ಯವನ್ನು ನಿವಾರಿಸಲಾರಿರಾ? ಇದೇ ನಿಮಗೆ ನಾವು ಅನವರತವೂ ಮಾಡುವ ಪ್ರಾರ್ಥನೆ.

ಸೇವಾಧರ್ಮದ ಪ್ರತಿರೂಪರೇ ನೀವು. ನಿಮ್ಮ ಮಾತೃತ್ವವು ಸೇವೆಯ ರೂಪದಲ್ಲಿ ನಿಮ್ಮ ಜೀವನದಲ್ಲಿ ಕಾಣಬರುತ್ತಿತ್ತು; ಎಲ್ಲರ ಮಡಿಲನ್ನೂ ತುಂಬುತ್ತಿತ್ತು. ಹತ್ತಿರದ ಊರುಗಳಿಂದ ಬಂದ ಭಕ್ತರಿಗೆ ಹೇಗೋ, ದೂರದೂರಗಳಿಂದ ಬಂದ, ಭಾಷೆಯನ್ನೂ ಅರಿಯದ ಭಕ್ತರಿಗೂ ಅಷ್ಟೇ ಪ್ರೇಮದ ಉಣಿಸನ್ನು ಉಣಿಸಿದವರು ನೀವು. ಅವರ ಸೇವೆಯಲ್ಲಿ ನಿಮಗದೆಷ್ಟು ಕಾತರ! ಅವರಿಗೆ ಊಟ ಬಡಿಸುವುದರಲ್ಲಿ ಅದೆಷ್ಟು ಅಕ್ಕರೆ! ಅವರ ಆರೈಕೆಯಲ್ಲಿ ಅದೆಷ್ಟು ಎಚ್ಚರ! ತಾಯೇ, ಸೇವಾಭಾವನೆಯೆಂದರೆ ಏನು ಎಂದು ನಿಮ್ಮ ಜೀವನದಲ್ಲಿ ಪೂರ್ಣವಾಗಿ ಪ್ರಕಟಿಸಿದಿರಿ. ಸೇವಾಕ್ಷೇತ್ರದಲ್ಲಿ ಇರುವವರಿಗೆಲ್ಲರಿಗೂ ನೀವೇ ಆದರ್ಶ, ನೀವೇ ತಂಬೆಳಕು.

ತಾಯೇ, ಪರಮ ವಾತ್ಸಲ್ಯಮಯಿ ನೀವು. ನಿಮ್ಮ ವಾತ್ಸಲ್ಯದ ಮಡಿಲು ವಿಶ್ವವ್ಯಾಪಕವಾಗಿ ಹಬ್ಬಿರುವುದು. ಆ ವಾತ್ಸಲ್ಯದ ತೀರ್ಥದಲ್ಲಿ ನಾವು ಮಿಂದು ಪುನೀತರಾಗಿಹೆವು. ಸಾಗರದಾಚೆಯಿಂದ ಬಂದ ಸೋದರಿ ನಿವೇದಿತಾಳಿಗೂ ನಿಮ್ಮ ಮಡಿಲು ತೆರೆದಿತ್ತು. ಆಕೆ ನಿಮ್ಮ ಪ್ರೀತಿಪಾತ್ರ ಪುತ್ರಿಯಾದಳು. ಜಗನ್ಮಾತೆಯ ಪರಮಸಾತ್ವಿಕ ಪ್ರತಿರೂಪ ನೀವು. ಚರಾಚರ ಜೀವಿಗಳ ತಾಯಿ ನೀವು. ನಿಮ್ಮನ್ನು ಏನು ಕೇಳಿಕೊಳ್ಳಬೇಕೆಂದೇ ತಿಳಿಯದ ಅಜ್ಞರು ನಾವು. ಮಾತು ಬಾರದ ಮಕ್ಕಳ ಕಾತರಿಕೆಯನ್ನು ತಾಯಿ ಅರ್ಥಮಾಡಿಕೊಳ್ಳುವುದಿಲ್ಲವೇ? ಹಾಗೆಯೇ ನಮ್ಮ ಜೀವನಕ್ಕೆ ಏನು ಬೇಕೆಂಬುದೂ ತಿಳಿಯದ ನಮ್ಮ ಆವಶ್ಯಕತೆಗಳು ನಿಮಗೆ ಗೊತ್ತಿಲ್ಲವೇನು? ಹೀಗಾಗಿ ನಮಗೆ ಏನು ಬೇಕೋ ಅದನ್ನು ದಯವಿಟ್ಟು ಅನುಗ್ರಹಿಸಿರಿ. ನೀವೇನು ಕೊಡುತ್ತೀರೋ, ಇಲ್ಲವೋ ಅದು ನಿಮಗೆ ಬಿಟ್ಟಿದ್ದು. ಆದರೆ, ನಾನು ಕೇಳುವುದಿಷ್ಟೇ. ನಿಮ್ಮ ಪವಿತ್ರ ಚರಣಾರವಿಂದಗಳಲ್ಲಿ ಅವ್ಯಾಜ ಭಕ್ತಿಯನ್ನು ನನಗೆ ದಯಪಾಲಿಸಿರಿ. ನಿಮ್ಮ ಪಾದಗಳ ಆರಾಮಧಾಮವನ್ನು ನನಗೆ ಅನುಗ್ರಹಿಸಿರಿ.

ಪರಿಶುದ್ಧ ಸಂನ್ಯಾಸಿನಿಯಾದರೂ, ಗೃಹಸ್ಥಧರ್ಮವನ್ನು ಚಾಚೂತಪ್ಪದೆ ಪರಿಪಾಲಿಸಿದವರು ನೀವು. ಪತಿದೇವರ ಸೇವೆಯನ್ನೇ ಆಧ್ಯಾತ್ಮಿಕ ಸಾಧನೆಯನ್ನಾಗಿ ಪರಿವರ್ತಿಸಿಕೊಂಡಿರಿ. ನಿಮ್ಮ ಸುತ್ತಮುತ್ತಲ ಬಂಧುಬಾಂಧವರ ಸೇವೆಗೆ ಟೊಂಕಕಟ್ಟಿ ನಿಂತಿರಿ. ಹಲವಾರು ಅಪಮಾನಗಳನ್ನು ಎದುರಿಸಿಯೂ, ಸಾಮರಸ್ಯದ ಬಾಂಧವ್ಯವನ್ನು ಬೆಳೆಸಿಕೊಂಡಿರಿ; ನಿಮ್ಮೆಲ್ಲರ ತಮ್ಮಂದಿರ ನೆಚ್ಚಿನ ಅಕ್ಕನಾದಿರಿ. ಗೃಹಸ್ಥರ ಕಷ್ಟಗಳನ್ನು ನೀವೇ ಹೊತ್ತುಕೊಂಡು ಸಂಸಾರವನ್ನು ನಡೆಸಿದಿರಿ. ತಾಯೇ, ಇದು ನಮ್ಮೆಲ್ಲರಿಗೂ ನಿಜವಾಗಿಯೂ ಆದರ್ಶ.

ಹಿಮಾಲಯದ ಮುಂದೆ, ಗರಿಕೆ ಹುಲ್ಲಿಗೇನು ಗರಿಮೆ ಇಹುದು? ನಿಮ್ಮ ಮಹೋನ್ನತ ವ್ಯಕ್ತಿತ್ವವನ್ನು ಎಷ್ಟು ಚಿಂತಿಸಿದರೂ, ಅದು ತಲುಪಲಾರದ ಎತ್ತರಕ್ಕೆ ಏರುತ್ತಲೇ ಇರುವಂತೆ ಕಂಡುಬರುತ್ತಿದೆ. ಅದರ ವಿಸ್ತಾರ ಆಕಾಶದಷ್ಟು; ಎತ್ತರ ಗೌರೀಶಂಕರದಷ್ಟು; ಅಗಾಧತೆ ಸಾಗರದಷ್ಟು. ತಾಯೇ, ನಿಮ್ಮ ವ್ಯಕ್ತಿತ್ವದ ಈ ಅನಂತ ವ್ಯಾಪಕತೆಯಲ್ಲಿ ನನ್ನ ಕ್ಷುಲ್ಲಕ ಅಹಮಿಕೆಯನ್ನು ಕರಗಿಸಿಕೊಂಡುಬಿಡಿ. ನನ್ನೆಲ್ಲ ತನು-ಮನವೂ, ಬಿಂದುವು ಸಾಗರದಲ್ಲಿ ಒಂದಾಗುವಂತೆ, ನಿಮ್ಮ ಅಪಾರ ಮಹಿಮೆಯಲ್ಲಿ ಒಂದಾಗಿಬಿಡಲಿ. ನಾನು ನಿಮ್ಮ ಅತಿ ನಿಕೃಷ್ಟ, ಹೀನ ಪುತ್ರನೆಂಬುವುದನ್ನು ಬಿಟ್ಟು ನನ್ನಲ್ಲಿ ಏನು ತಾನೇ ಹೇಳಿಕೊಳ್ಳುವುದಿದೆ? ತಾಯೇ, ನಿಮ್ಮ ಕೃಪೆಯೇ ನನ್ನ ಜೀವನ ರಕ್ಷೆ. ನಿಮ್ಮ ಒಲವೇ ನನ್ನ ಬಾಳಿಗೆ ಸಾಂತ್ವನದ ಸುಧೆ.

ನನ್ನ ಬಾಳಿನ ಒಂದೇ ಭಾಗ್ಯ ಏನೆಂದು ಹೇಳಲೇ, ತಾಯೇ? ನಿಮ್ಮ ಪುತ್ರ ಎನ್ನುವ ಹೆಮ್ಮೆ. ಆದರೆ ನಿಮ್ಮ ಸತ್ಪುತ್ರನಾಗುವ ಅರ್ಹತೆ ನನ್ನಲ್ಲಿ ಇಲ್ಲವಲ್ಲಾ ಎಂಬ ಒಂದೇ ಕೊರಗು ನನ್ನದು. ಇಡೀ ಜಗತ್ತು ಸ್ವಾರ್ಥ ಮತ್ತು ಅಹಂಕಾರಗಳ ದಳ್ಳುರಿಯಲ್ಲಿ ಬೇಯುತ್ತಿರುವಾಗ, ನಮ್ಮ ಬದುಕೆಲ್ಲ ಕಾಮಿನಿಕಾಂಚನಗಳ ಅಸಹ್ಯ ಹುಡುಕಾಟದಲ್ಲಿ ಕಳೆದುಹೋಗುತ್ತಿರುವಾಗ, ನಿಮ್ಮ ಮಾತೃಸ್ನೇಹವೊಂದೇ, ನಿಮ್ಮ ನಿಸ್ವಾರ್ಥ ಒಲವೊಂದೇ ನಮ್ಮ ಬದುಕಿಗೆ ಆಧಾರವಾಗಬಲ್ಲದು; ನಿಮ್ಮ ಸ್ಮರಣೆಯೊಂದೇ ನಮ್ಮ ಜೀವನದ ಉಸಿರಾಗಬಲ್ಲದು; ನಿಮ್ಮ ಪ್ರಾರ್ಥನೆಯೊಂದೇ ನಮ್ಮ ಬಾಳಿನ ಬೆಳಕಾಗಬಲ್ಲದು.

"ಬೇರೆಯವರಲ್ಲಿ ದೋಷ ಕಂಡುಹಿಡಿಯದಿರು. ನಿನ್ನಲ್ಲಿರುವ ದೋಷವನ್ನು ಕಂಡುಹಿಡಿದು ಸರಿಪಡಿಸಿಕೋ. ಜಗತ್ತಿನಲ್ಲಿ ಯಾರೂ ಅಪರಿಚಿತರಲ್ಲ. ಜಗತ್ತೆಲ್ಲವೂ ನಿನ್ನದೇ. ಎಲ್ಲರೂ ನಿನ್ನವರೇ" – ಇದೇ ನಿಮ್ಮ ಚರಮಸಂದೇಶ.

ಇದು ಓದುವುದಕ್ಕೆ ಎಷ್ಟು ಸುಲಭವಾಗಿ ಕಾಣುವುದೋ, ಆಚರಣೆಗೆ ತರುವುದರಲ್ಲಿ ಅಷ್ಟೇ ಕಠಿಣ. ಆದರೆ ಅಂಥ ಧೀರವ್ರತವನ್ನು ನೀವು ನಿಮ್ಮ ಜೀವನವ್ರತವನ್ನಾಗಿ ಮಾಡಿಕೊಂಡಿರಿ. ನಿಂದನೆಗಳ ಸುರಿಮಳೆ ಸುರಿದರೂ, ಕರುಣೆ, ವಾತ್ಸಲ್ಯಗಳ ಹೂಮಳೆಯನ್ನೇ ಎಲ್ಲೆಲ್ಲೂ ಚೆಲ್ಲಿದಿರಿ. ತಾಯೇ, ನೀವು ತೋರಿಸಿಕೊಟ್ಟ ಈ ಭವ್ಯ ಆದರ್ಶದ ಕಣಭಾಗ ದಷ್ಟನ್ನಾದರೂ, ನಾವು ನಮ್ಮ ಜೀವನದಲ್ಲಿ ಆಚರಿಸಲು ಸಾಧ್ಯವಾಗುತ್ತಿಲ್ಲವಲ್ಲಾ! ನಮ್ಮ ಸುತ್ತಮುತ್ತಲೆಲ್ಲ, ಪರರ ದೋಷಗಳೇ ನಮಗೆ ಕಾಣುತ್ತಿದೆಯಲ್ಲಾ! ಪರರನ್ನು ನಿಂದಿಸುವುದರಲ್ಲಿಯೇ ದಿನನಿತ್ಯದ ಬಹುಕಾಲವು ಕಳೆದುಹೋಗುತ್ತಿದೆಯಲ್ಲಾ! ತಾಯೇ, ನಿಮ್ಮ ವಿಶಾಲ ಹೃದಯದ, ಅಪಾರ ಅನುಕಂಪೆಯ, ಅಸೀಮ ಸಹನೆಯ ಒಂದು ಕಣದಷ್ಟನ್ನಾದರೂ, ನಾವು ನಮ್ಮ ಜೀವನದಲ್ಲಿ ತಂದುಕೊಳ್ಳಲು ಅನುಗ್ರಹಿಸಿರಿ. ಆಮೂಲಕ, ನಿಮ್ಮ ಪವಿತ್ರಚಾರಿತ್ರ್ಯದ ಒಂದು ಕಿಡಿಯನ್ನಾದರೂ ಜೀವನದಲ್ಲಿ ಸಾಕಾರಗೊಳಿಸಿಕೊಳ್ಳುವ ಅವಕಾಶವನ್ನು ನನಗೆ ದಯಪಾಲಿಸಿರಿ.

ನನ್ನ ದೌರ್ಬಲ್ಯಗಳನ್ನು ಹೇಗೆ ತಾನೇ ಹೇಳಿಕೊಳ್ಳಲಿ, ತಾಯಿ? ನಾಚಿಕೆಯಿಂದ ತಲೆ ಬಾಗುವುದು; ಮನಸ್ಸು ಮುದುಡುವುದು; ಹೃದಯ ಭಾರವಾಗುವುದು. ಆ ದೌರ್ಬಲ್ಯಗಳೆಲ್ಲ ನಿಮ್ಮ ವಾತ್ಸಲ್ಯ ಪ್ರವಾಹದಲ್ಲಿ ಕೊಚ್ಚಿ ಹೋಗಲಿ. ನಿಮ್ಮ ಕರುಣೆಯ ಪುಣ್ಯ ಮಾರುತವು ಅವನ್ನೆಲ್ಲ ನನ್ನ ಮನಸ್ಸಿನಿಂದ ಬೇರು ಸಹಿತ ಕಿತ್ತುಹಾಕಲಿ. ನಿಮ್ಮ ಅನುಗ್ರಹದ ಜ್ಯೋತಿಯ ಬೆಳಕಿನಿಂದ ನನ್ನ ಬಾಳಪಥ ಬೆಳಗಲಿ. ಎಂದೆಂದೂ ನಿಮ್ಮ ಸ್ಮರಣೆ ನನ್ನ ಜೊತೆಗಿದ್ದು, ಅದು ನನ್ನ ಜೀವಿತದ ಉಸಿರಾಗಲಿ.

*ಇಂತಿ ತಮ್ಮ ದೀನ ಪುತ್ರ* ✻

## ಹೀಗೊಂದು ಪತ್ರ

ಪೂಜ್ಯ ಸ್ವಾಮೀಜಿ, ಪ್ರಣಾಮಗಳು.

ವಿವೇಕಪ್ರಭ ಪತ್ರಿಕೆಯಲ್ಲಿ ಸಂಪಾದಕೀಯ ಲೇಖನ ನನಗೆ ಬಹಳ ಪ್ರಿಯವಾದ ಭಾಗ. ೨೦೧೩ರ ಆಗಸ್ಟ್ ತಿಂಗಳ ಪತ್ರಿಕೆಯಲ್ಲಿನ ಸಂಪಾದಕೀಯ ಬಹಳ ಅರ್ಥವತ್ತಾಗಿ ಮೂಡಿಬಂದಿದೆ. ಬರೀ ಚೆನ್ನಾಗಿದೆ ಎಂದು ಇದರ ಅರ್ಥವಲ್ಲ. ಅದರಲ್ಲೂ ಉಪಸಂಹಾರದಲ್ಲಿ, ಗೀತೆಯ ಸಂದೇಶವನ್ನು ಆಧುನಿಕ ಕಾಲಕ್ಕೆ ಅನ್ವಯಿಸಿ ಬರೆದಿರುವುದು ಬಹಳ ಚೆನ್ನಾಗಿದೆ. ಎಲ್ಲರೂ ಇದನ್ನು ಓದಿ ಅನುಷ್ಠಾನ ಮಾಡಿದರೆ ಸಮಾಜ ಎಷ್ಟು ಚೆನ್ನಾಗಿರುತ್ತದೆ! ಈ ಲೇಖನದಲ್ಲಿ ಭಗವದ್ಗೀತೆಯ ೧೧ ನೇ ಅಧ್ಯಾಯದ ೫೫ನೇ ಶ್ಲೋಕದ ಒಂದೊಂದು ಪದದ ಅರ್ಥವನ್ನೂ ವಿವರಿಸಿದ್ದೀರಿ. ಆ ಶ್ಲೋಕ ನನಗೆ ಮೊದಲಿನಿಂದಲೂ ಇಷ್ಟವಾದದ್ದು. ಪದಗಳ ಅರ್ಥವನ್ನು ಸುಲಭವಾಗಿ, ಒಬ್ಬ ಸಾಮಾನ್ಯ ಮನುಷ್ಯ ಕೂಡ ಅರ್ಥಮಾಡಿಕೊಳ್ಳುವಂತೆ ವಿವರಿಸಿದ್ದೀರಿ. ವಂದನೆಗಳು.

ಹಾಗೂ ಪೂಜ್ಯ ಸ್ವಾಮಿ ನಿತ್ಯಸ್ಥಾನಂದಜಿ ಅವರ 'ಭಗವದ್ಗೀತಾ ತತ್ತ್ವಸೌರಭ' ಶೀರ್ಷಿಕೆಯ ಲೇಖನಗಳು ಬಹಳ ಚೆನ್ನಾಗಿವೆ. ನನಗೆ ಭಗವದ್ಗೀತೆ ಅರ್ಥವಾಗಿರುವುದು ಕಡಮೆ ಎಂದೇ ಹೇಳಬೇಕು. ಅದರ ಸಾರವನ್ನು ನಮ್ಮ ಜೀವನದಲ್ಲಿ ಆದಷ್ಟು ಮಟ್ಟಿಗೆ ಅಳವಡಿಸಿಕೊಂಡರೆ, ಜೀವನವನ್ನು ಸಾರ್ಥಕ ಮಾಡಿಕೊಳ್ಳಬಹುದು ಎಂದು ನನ್ನ ಅನಿಸಿಕೆ. ಈ ದೃಷ್ಟಿಯಲ್ಲಿ ಈ ಲೇಖನಗಳು ನಮಗೆ ಸಹಾಯಕಾರಿಯಾಗುತ್ತವೆ. ಪೂಜ್ಯ ಸ್ವಾಮಿ ನಿತ್ಯಸ್ಥಾನಂದಜಿ ಅವರಿಗೆ ನನ್ನ ಧನ್ಯವಾದಗಳು ಮತ್ತು ಪ್ರಣಾಮಗಳು.

ಹಾಗೆಯೇ ೨೦೧೩ರ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಶರಣರ ನೀತಿ, ಬಸವಣ್ಣನವರ ಆತ್ಮಪರಿಶೀಲನೆ, ವಚನಸಾಹಿತ್ಯ ಮುಂತಾದವು ಉಪಯುಕ್ತವಾದುವು. ಹೀಗೆಯೇ ಬೇರೆ ಬೇರೆ ಆಚಾರ್ಯರುಗಳ ಬಗ್ಗೆ ಮತ್ತು ಮತಗಳ ಬಗ್ಗೆ ಪ್ರಕಟವಾಗುತ್ತಿರುವ ಲೇಖನಗಳು ಕೂಡ ಪ್ರಯೋಜನಕಾರಿ. ಇವುಗಳಿಂದ ನಾವು ಎಷ್ಟೋ ಹೊಸ ವಿಷಯಗಳನ್ನು ತಿಳಿದುಕೊಳ್ಳಬಹುದು. ನಾವು ವಿದ್ಯಾರ್ಥಿಗಳಾಗಿದ್ದ ಕಾಲದಲ್ಲಿ, ಈ ತರಹದ ಲೇಖನಗಳನ್ನು ಓದುವಂತೆ ಇದ್ದಿದ್ದರೆ, ಎಷ್ಟೋ ಸಹಾಯವಾಗುತ್ತಿತ್ತು ಎಂದು ಈಗ ನಾನು ವಿಷಾದಿಸುತ್ತೇನೆ.

ಹಾಗೆಯೇ, ಇನ್ನಿತರ ಶೀರ್ಷಿಕೆಗಳಾದ, 'ಶಿಕ್ಷಕರೇ ಗಮನಿಸಿ,' 'ಪೋಷಕರೇ ಗಮನಿಸಿ', 'ವಿದ್ಯಾರ್ಥಿಗಳೇ ಗಮನಿಸಿ' ಬಹಳ ಉತ್ತಮವಾಗಿ ಮೂಡಿಬರುತ್ತಿವೆ. ಅದರಲ್ಲೂ ಮೊದಲ ಎರಡು ಶೀರ್ಷಿಕೆಗಳಲ್ಲಿ ಬರುವ ಲೇಖನಗಳನ್ನು ಎಲ್ಲ ತಂದೆತಾಯಿಗಳು, ಶಿಕ್ಷಕರು ಓದಿ, ತಮ್ಮನ್ನು ತಾವು ತಿದ್ದಿಕೊಂಡರೆ, ಮಕ್ಕಳು ತಾವಾಗಿಯೇ ಸರಿಹೋಗುತ್ತಾರೆ. ಈ ವಿಷಯವನ್ನು ಇನ್ನೂ ವಿವರಿಸಿ ಬರೆದರೆ, ಬಹಳ ಒಳ್ಳೆಯದೆಂದು ನನ್ನ ಅನಿಸಿಕೆ. ಒಬ್ಬ ತಾಯಿಯಾಗಿ, ನಿವೃತ್ತ ಶಾಲಾ ಮುಖ್ಯೋಪಾಧ್ಯಾಯಿನಿಯಾಗಿ ನನ್ನ ಸ್ವಂತ ಅನುಭವದ ಮಾತುಗಳನ್ನು ಬರೆದಿದ್ದೇನೆ.

ಒಟ್ಟಿನಲ್ಲಿ 'ವಿವೇಕಪ್ರಭ' ಒಂದು ಉತ್ತಮವಾದ ಮತ್ತು ಎಲ್ಲರೂ ಓದಲೇಬೇಕಾದ ಮಾಸಪತ್ರಿಕೆ. ಆಧುನಿಕ ದಿನಗಳಲ್ಲಿ ಜನರು ಬಹಳಷ್ಟು ಹಣ ಗಳಿಸುವುದನ್ನು ಮತ್ತು ಭೋಗದ ಜೀವನವನ್ನು ನಡೆಸುವುದನ್ನು ಬಿಟ್ಟರೆ, ಬೇರೆ ಯಾವುದಕ್ಕೂ ತಮಗೆ ಸಮಯ ಇಲ್ಲ ಎಂದು ಹೇಳುತ್ತಾರೆ. ಇದರ ಪರಿಣಾಮವಾಗಿ ಎಲ್ಲ ರೀತಿಯ ಖಾಯಿಲೆಗಳು, ಒತ್ತಡಗಳು, ಮಾನಸಿಕ ಖಿನ್ನತೆ ಮತ್ತು ಸ್ವಾರ್ಥಪ್ರವೃತ್ತಿಗಳನ್ನು ಅವರ ಜೀವನದಲ್ಲಿ ಕಾಣುತ್ತೇವೆ. ಹಾಗೆಯೇ ಸಮಾಜವೂ ಇದರ ದುಷ್ಪರಿಣಾಮಗಳಿಗೆ ತುತ್ತಾಗಿದೆ. ಆದ್ದರಿಂದ ಅಂಥ ಜನರು, ಅದರಲ್ಲೂ ಯುವ ಸಮುದಾಯದವರು ಈ ಪತ್ರಿಕೆಯನ್ನು ಖಂಡಿತ ಓದಬೇಕೆಂದು ನನ್ನ ಅಭಿಪ್ರಾಯ.

ಈ ಎಲ್ಲ ಅನಿಸಿಕೆಗಳು ನನ್ನ ಸ್ವಂತ ಅನುಭವದಿಂದ ಬರೆದವು. ಇದೇ ರೀತಿಯಲ್ಲಿ ಮುಂದೆಯೂ 'ವಿವೇಕಪ್ರಭ' ದ ಲೇಖನಗಳು ಚೆನ್ನಾಗಿ ಮೂಡಿಬರಲೆಂದು ಹಾರೈಸುತ್ತೇನೆ.

– ಸಿ. ಎನ್. ಕಮಲಾ, ಮೈಸೂರು